ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ
*ಹೆಣ್ಣಿಗೂ, ಹೆಂಡಕ್ಕೂ ಇರುವ ಅಂತರವೇನು?*



ಹೆಂಡವನ್ನು ಪೀಪಾಯಿಯ ಆಕಾರದಲ್ಲೂ ಸಂತೋಷದಿಂದ ಸ್ವೀಕರಿಸುತ್ತಾರೆ.

ಮಾಧುರಿ ಮ. ನಾಯಿಕ, ಬೆಳಗಾವಿ
*ಕನಕದಾಸರ ಪ್ರಕಾರ 'ನಾನು' ಹೋದರೆ ಸ್ವರ್ಗಕ್ಕೆ ಹೋಗಬಹುದು. ಈಗಿನ ಯುಗದಲ್ಲಿ 'ನಾನು' ಹೋದರೆ ಎಲ್ಲಿಗೆ ಹೋಗಬಹುದು?*
ಹುಚ್ಚಾಸ್ಪತ್ರೆಗೆ. ಆಧಾರ್ ಕಾರ್ಡ್ ಇಲ್ಲದೆ ಸೇರಿಸಿಕೊಳ್ಳುವ ಜಾಗ ಅದೊಂದೇ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಅಪಘಾತದಲ್ಲಿ ವಿಲಿವಿಲಿ ಒದ್ದಾಡುವವರಿಗೆ ಸಹಾಯ ಮಾಡದೆ ಸೆಲ್ಫಿ ತೆಗೆದುಕೊಳ್ಳುವವರಿಗೆ ಏನೆಂಬೆ ರಾಮ್?*
ಮಾನವೀಯ ಪ್ರಪಂಚದ ದೃಷ್ಟಿಯಲ್ಲಿ ಸತ್ತು ಫೇಸ್‌ಬುಕ್ ಪ್ರಪಂಚದಲ್ಲಿ ಮಾತ್ರ ಜೀವಿಸಿರುವ ಸ್ವಪ್ರೀತಿಭೂತಗಳು.

ವಿ.ಎಸ್. ಹಿಂದೂಪುರ, ಬಳ್ಳಾರಿ
*ಬಂದ್ ಸಮಯದಲ್ಲಿ ಟೈರಿಗೆ ಬೆಂಕಿ ಹಚ್ಚುವ ಸಂಪ್ರದಾಯ ಎಲ್ಲಿಂದ ಶುರುವಾಯಿತು?*



ಲಂಕಾದಹನವೇ ಸ್ಫೂರ್ತಿ. ಒಂದೇ ವ್ಯತ್ಯಾಸ– ಆಗಿನದು ಹನುಮನ ಪರಾಕ್ರಮ; ಈಗಿನದು ಕೋತಿಬುದ್ಧಿ.

ವ. ಉಮೇಶ ಕಾರಂತ, ಮಂಗಳೂರು
*ಹುಡುಗಾಟಕ್ಕೂ, ಹುಡುಕಾಟಕ್ಕೂ ಏನಿದೆ ವ್ಯತ್ಯಾಸ?*
ಒಂದು ತುಡಿತ; ಮತ್ತೊಂದು ದುಡಿತ.

ಕೆ.ಜಿ. ಶೇಖರಪ್ಪ, ಅರಸೀಕೆರೆ
*ಜ್ಯೋತಿಷಿಗಳ ಭವಿಷ್ಯವನ್ನು ನಂಬಬಹುದೆ ಸಾರ್?*
ನಂಬಿ. ಆ ಡೋಂಗಿಗಳನ್ನು ನೀವು ನಂಬುವುದರಿಂದ ಅವರ ಭವಿಷ್ಯ ಉಜ್ವಲವಾಗುತ್ತದೆ.

ದೇವೇಂದ್ರ, ಕಡೂರು
*ಸಮುದ್ರದ ನೀರು ಅಕಸ್ಮಾತ್ ಸಿಹಿಯಾಗಿದ್ದಿದ್ದರೆ?*
1942ರಲ್ಲಿ ಸಕ್ಕರೆ ಸತ್ಯಾಗ್ರಹ ನಡೆಯುತ್ತಿತ್ತು.

ಎಸ್. ಗೋಪಾಲರಾವ್, ಬೆಂಗಳೂರು
*ಮೊದಲಿದ್ದಷ್ಟೇ ಮಂದಿ ನಮ್ಮ ಮನೆಯಲ್ಲಿದ್ದರೂ ಈಚೆಗೆ ಟೂತ್‌ಪೇಸ್ಟ್ ಬಳಕೆಯಲ್ಲಿ ಅತಿ ಮಿತವ್ಯಯವಾಗುತ್ತಿದೆ. ಅದು ಹೇಗೆ?*
ಇಬ್ಬರದು ಬೊಚ್ಚುಬಾಯಿ ಆಯಿತಂತಲ್ಲ.

ಹೇಮಾವತಿ ಜೈನ್, ಹೂವಿನಹಡಗಲಿ
*ನಿಮಗೆಸೆಯುವ ಪ್ರಶ್ನೆ ಹಳೆಯ ಬಿಸ್ಕತ್ತಿನಂತೆ ಮೆತ್ತಗಾಗುತ್ತಿದೆ. ಏನು ಪರಿಹಾರ ಸಾರ್?*
ರುಚಿಗೆಡದ, ಮೆದುವಾಗದ ಗೋಡಂಬಿ, ಬಾದಾಮಿ, ಖರ್ಜೂರಗಳಂತಹ ಪ್ರಶ್ನೆ ಕಳುಹಿಸಿ.

ಅಸಂಧಿಮಿತ್ರಾ, ಶಿವಮೊಗ್ಗ
*ಗಾಂಧೀಜಿ ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂತ್ ಅನ್ನು ಯಾವ ಪೆನ್ನಿನಲ್ಲಿ ಬರೆದರು?*
ಕ್ಷಮಿಸಿ; ಅವರು ಬರೆದದ್ದು ಪೆನ್ನಿನಲ್ಲಲ್ಲ, ಪೇಪರ್‌ನಲ್ಲಿ.

ಬಿ. ಚಂದ್ರೇಗೌಡ, ಬೆಂಗಳೂರು
*ಸರ್ಕಾರಿ ಶಾಲೆ ಬೇಡ; ಸರ್ಕಾರಿ ಆಸ್ಪತ್ರೆ ಬೇಡ. ಆದರೆ ಸರ್ಕಾರಿ ನೌಕರಿ ಮಾತ್ರ ಯಾಕೆ ಬೇಕು?*
ಕಲ್ಪವೃಕ್ಷ ನ್ಯಾಯ! ನಾರು, ಕರಟ ಹೊರಗಿಟ್ಟು ನೀರು, ಕಾಯಿ ತಿನ್ನುವುದು ನಮ್ಮ ಸಂಪ್ರದಾಯ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹೆಣ್ಣಿನ ವಯಸ್ಸು ಕೇಳಬಾರದು. ಮಂತ್ರಿಯ...?*
ಚುನಾವಣಾ ಭಾಷಣ ಕೇಳಬಾರದು.

ಸತ್ಯೇಂದ್ರಸ್ವಾಮಿ, ಹರವೆ
*ದೇವಾನುದೇವತೆಗಳಿಗೆ ನಮ್ಮಂತೆ ಮಕ್ಕಳೇಕೆನೋ ಇವೆ. ಮೊಮ್ಮಕ್ಕಳೇಕಿಲ್ಲ?*
ಗಣಪನಂತೆ ತಲೆಹೋಗುವ ಸ್ಥಿತಿ ಬಂದು, ಟ್ರಾನ್ಸ್‌ಪ್ಲಾಂಟ್‌ಗೆ ತಲೆ ಸಿಗದಿದ್ದರೆ ಕಷ್ಟವಾದೀತೆಂದು ಮಕ್ಕಳೇ ಬೇಡವೆಂದು ನಿರ್ಧರಿಸಿರುವರಂತೆ.

## ಬಹುಮಾನಿತ ಪ್ರಶ್ನೆ

ಅಮರಯ್ಯಾ ಪತ್ರಿಮಠ, ಶೋರಾಪೂರ
*ಹೆಣ್ಣು ನಾಚಿದಾಗ ನೀರಾಗುತ್ತಾಳಂತೆ. ಗಂಡು?*
ಆ ನೀರಿಗಾಗಿಯೇ ಕಾಯುವ ಬಕೆಟ್.

ಎಸ್.ಎನ್. ಮಹಾಬಲರಾವ್, ಎನ್ನಾರ್‌ಪುರ
*ಮನೆ ಸಿಕ್ಕಿದೆ. ನೆಮ್ಮದಿ ಸಿಕ್ಕಿಲ್ಲವಲ್ಲಾ....?*
ತೃಪ್ತಿ ಎಂಬ ಬ್ರೋಕರನ್ನು ಹಿಡಿಯಿರಿ; ಒಳ್ಳೆ ನೆಮ್ಮದಿ ಕೊಡಿಸುತ್ತಾನೆ.

ಪೇಂಟರ್ ಪಾಪು, ಸಂತೇಮರಹಳ್ಳಿ
*ಬೇಡುವ ಭಕ್ತನಿಗೂ, ನೀಡುವ ದೇವನಿಗೂ ಏನು ಸಂಬಂಧ?*
ವಿಧಿ ನಿಗದಿಸಿದಷ್ಟನ್ನೇ ನೀಡುವ ರೇಷನ್ ಅಂಗಡಿಯ ಮಾಲಿಕ, ಗಿರಾಕಿಯ ಸಂಬಂಧ.

ಜಾಕೋಬ್ ಡಿಸೋಜ, ಕುರುವಳ್ಳಿ
*ಮೊದಲು ದೇವರಂತಿದ್ದ ಮಕ್ಕಳು ಮುಂದೆ ದೆವ್ವಗಳಾಗಲು ಕಾರಣವೇನು?*



ಮೊದಲಿನದು ಸ್ವಸ್ವಭಾವ; ನಂತರದ್ದು ಸಹವಾಸದೋಷ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಹದ್ದಿಗೂ, ಹದ್ದು ಮೀರಿದವರಿಗೂ ಏನು ವ್ಯತ್ಯಾಸ?*
ಹದ್ದು ದೇಹವನ್ನು ಮಾತ್ರ ಕಿತ್ತು ತಿನ್ನುತ್ತದೆ; ಹದ್ದು ಮೀರಿದವರು ಮನಸ್ಸು, ದೇಹ, ಸಂಸ್ಕೃತಿ, ಆಚಾರ, ಎಲ್ಲವನ್ನೂ ಕಿತ್ತು ತಿನ್ನುತ್ತಾರೆ.

ಬಾ.ರಂ. ಸುರೇಶ್, ಶಿವಮೊಗ್ಗ
*ಮೊಬೈಲ್ ಬಂದನಂತರ ಮನೆಗೆ ನೆಂಟರು ಬರುವುದು ಹೋಗುವುದು ಕಡಿಮೆಯಾಗಿದೆಯಲ್ಲಾ, ಏಕೆ?*
ಮನೆಯವ್ರು ಇನ್‌ಕಮಿಂಗ್‌ನಲ್ಲೇ ಬಿಝಿಯಿದ್ರೆ ಬಂದವ್ರು ಔಟ್ ಗೋಯಿಂಗ್ ಆಗ್ಬೇಕಾದ್ರಿಂದ ಮಿಸ್ ಆಗ್ತಿದ್ದಾರಂತೆ.

ಮಾಲತಿ ರಾಜು, ಬೆಂಗಳೂರು
*ಮದುವೆಯಾದ ಗುರುತಿಗೆ ತಾಳಿ, ಕಾಲುಂಗುರ ಹೆಣ್ಣಿಗೆ. ಗಂಡಿಗೆ?*
ಇನ್ವಿಸಿಬಲ್ ಮೂಗುದಾರ.

■ ರಾಮ್